# ಅಡಿ ಆಣೆಯ ಕೃಪೆ ಹೊರನೀರಿಗೆ ಬೈಬೈ



ಕೇರಳದ ಡಾ. ಪಿ.ಕೆ. ತಂಬಿ ಅವರು ರೂಪಿಸಿರುವ 'ಅಡಿ ಆಣೆ'ಗಳು ಹತ್ತಾರು ಕಡೆಗಳಲ್ಲಿ ನೀರ ಕೊರತೆಗೆ ಉತ್ತರದ ಒರತೆಗಳಾಗಿ ಪರಿಣಮಿಸಿವೆ. ತಂಬಿ ಅವರ ನೀರಗಾಥೆಗಳು ದಕ್ಷಿಣ ಕನ್ನಡದಲ್ಲೂ ಯಶಸ್ವಿಯಾಗಿ ಹಬ್ಬಿಕೊಂಡಿವೆ.

■ ಶ್ರೀ ಪಡ್ರೆ

ವಿಶಾಲ ಜಮೀನಿದೆ. ಧಾರಾಳ ಮಳೆಯೂ. ಆದರೂ ನೀರೇ ಇಲ್ಲ!

ಪ್ರಕೃತಿ ಯಥೇಚ್ಛ ಮಳೆ ಕೊಟ್ಟರೂ, ಬೇಸಿಗೆಯಲ್ಲಿ ನೀರಿಗೆ ಟ್ಯಾಂಕರೇ ಗತಿ. ಇಂಥ ನತದೃಷ್ಟ ಸಂಸ್ಥೆಗಳು ನಮ್ಮಲ್ಲಿ ಧಾರಾಳ.

ಇಂಥ ಒಂದು ಸಂಸ್ಥೆಗೆ ಕೇರಳದ ಒಬ್ಬರು ಹಿರಿಯ ಜಲತಜ್ಞರು ಬರುತ್ತಾರೆ. ಜನಸಾಮಾನ್ಯನಂತೆ ಸದ್ದಿಲ್ಲದೆ ಕ್ಯಾಂಪಸ್ಸಿಗೆ ಎರಡು ಸುತ್ತು ಹಾಕುತ್ತಾರೆ. ಒಂದಷ್ಟು ಲೆಕ್ಕಾಚಾರ, ಮಾತುಕತೆಯ ನಂತರ, 'ಇಲ್ಲೇ ಇದೆಯಲ್ಲಾ ನೀರು. ಒಂದು ಕೊಳ ಮಾಡಿ ಕ್ಯಾಂಪಸ್ಸಿನಿಂದ ಓಡುವ ನೀರನ್ನೆಲ್ಲಾ ತುಂಬಿಕೊಳ್ಳಿ. ಬೇಸಿಗೆಯಲ್ಲಿ ಎತ್ತಿಕೊಳ್ಳಿ' ಎಂಬ ಸಲಹೆ ಕೊಟ್ಟು ನಿರ್ಗಮಿಸುತ್ತಾರೆ.

ಮುಂದಿನದು ಮಣ್ಣುಮಾಂದಿಗಳ (ಜೇಸೀಬಿ, ಹಿಟಾಚಿ) ಕೆಲಸ. ತಗ್ಗು ಜಾಗವೊಂದರಲ್ಲಿ ದೊಡ್ಡ 'ಮಳೆಕೊಳ' ರೂಪು ಪಡೆಯುತ್ತದೆ. ಅದು ಮೇಲಿನಿಂದ ಇಳಿದುಬರುವ ಮಳೆಯನ್ನೆಲ್ಲಾ ತನ್ನ ಒಡಲಲ್ಲಿ ತುಂಬಿಡುತ್ತದೆ. ಒಂದು – ತಪ್ಪಿದರೆ ಎರಡು ವರ್ಷಗಳಲ್ಲಿ ಸಂಸ್ಥೆ ಟ್ಯಾಂಕರ್ ನೀರಿಗೆ ವಿದಾಯ ಹೇಳುತ್ತದೆ.

ಈ ವಿಶಿಷ್ಟ ಮಳೆಕೊಯ್ಲಿನ ರಚನೆಯ ಹರಿಕಾರ ಡಾ. ಪಿ.ಕೆ. ತಂಬಿ. ಡಾ. ಪದ್ಮನಾಭ ಪಿಳ್ಳೈ ಕಾರ್ತಿಕೇಯನ್ ತಂಬಿ. ಪರಿಚಿತರಿಗೆ 'ತಂಬಿ ಸಾರ್'. ದಾಖಲೆಗಳ ಪ್ರಕಾರ, ಅವರಿಗೀಗ 79. ಆದರೆ ಅವರ ಜೀವನೋತ್ಸಾಹ ಕಂಡ ಯಾರೂ ಇದನ್ನು ಒಪ್ಪಲಾರರು.

ಕಾರ್ತಿಕೇಯನ್ ಕಲಿಕೆಯಿಂದ ಭೂಗರ್ಭಶಾಸ್ತ್ರ ತಜ್ಞರು. ತಿರುವನಂತಪುರದ 'ಸೆಂಟರ್ ಫಾರ್ ಅರ್ಥ್ ಸೈನ್ಸಸ್'ನ ಜಿಯೋಸೈನ್ಸ್ ವಿಭಾಗದ ಮುಖ್ಯಸ್ಥರಾಗಿ ನಿವೃತ್ತರಾದವರು. ಈಗ ತಿರುವನಂತಪುರಂ ವಾಸಿ. ನಿವೃತ್ತಿಯ ನಂತರ ಇವರು ಆರಂಭಿಸಿದ ಮಳೆಕೊಯ್ಲು ಸಲಹಾ ಸಂಸ್ಥೆಯ ಹೆಸರು 'ವೆಸ್ಟ್‌ಕಾನ್', WESTCON (Water Environmental Sciences & Technology Consultants). ದೊಡ್ಡ ಪ್ರಮಾಣದ ನೀರು ಬೇಕಾಗುವ, ಕ್ಷಾಮಬಾಧಿತ ಸಂಸ್ಥೆಗಳು ಈ ಸಂಸ್ಥೆಯ ಸೇವೆ ಪಡೆಯುತ್ತವೆ.

ಹೆಚ್ಚು ಮಳೆ ಬೀಳುವ, ಸಾಕಷ್ಟು ವಿಶಾಲ ಕ್ಯಾಂಪಸ್ ಹೊಂದಿದ ಸಂಸ್ಥೆಗಳಲ್ಲಷ್ಟೇ ಇವರ ಪರಿಹಾರವಿಧಾನ ಕಾರ್ಯಸಾಧ್ಯ. ಕಳೆದ ಎರಡು ದಶಕಗಳಲ್ಲಿ ಇವರ ಮಾರ್ಗದರ್ಶನದಲ್ಲಿ 40ಕ್ಕೂ ಹೆಚ್ಚು ಮಳೆಕೊಳಗಳ ನಿರ್ಮಾಣವಾಗಿವೆ. ಹೆಚ್ಚಿನವು ಕೇರಳದಲ್ಲಿ. ಕರ್ನಾಟಕದ ದ.ಕ. ಜಿಲ್ಲೆಯಲ್ಲೂ ಕೆಲವು. ಬೃಹತ್ತಾಗಿ ಬಾನಿಗೆ ಬೊಗಸೆ ಒಡ್ಡಿದ ಪರಿಣಾಮ ಎಲ್ಲೆಡೆ ನೀರ ನಿಶ್ಚಿಂತೆ ಆವರಿಸಿದೆ. ಬಹುಶಃ ಹಿಂದೆ ಈ ಗ್ರಾಹಕರು ಯಾರೂ ತಮ್ಮ ನೀರಿನ ವ್ಯವಸ್ಥೆ ಇಷ್ಟು ಸುಗಮವಾಗುವ ಕನಸೂ ಕಂಡಿರಲಾರರು.

## ನೀರೇ ಇಲ್ಲದಲ್ಲೇ ಮೊದಲ ಪ್ರಯೋಗ

ಡಾ. ತಂಬಿ ಅವರ ಚೊಚ್ಚಲ ಪ್ರಯತ್ನ ನಡೆದದ್ದು ಅವರದೇ ನಗರ ತಿರುವನಂತಪುರದಲ್ಲಿ. ಅಲ್ಲಿನ ಕಝುಕೂಟ್ಟಮ್ ಎಂಬಲ್ಲಿ ಸರ್ಕಾರಿ ಸ್ವಾಮ್ಯದ ಕಿನ್‌ಫ್ರಾ ಫಿಲ್ಮ್, ವಿಡಿಯೊ ಪಾರ್ಕ್ ಇದೆ. ಫಿಲ್ಮ್ ಪ್ರಾಸೆಸಿಂಗಿಗೆ ಹೆಚ್ಚು ನೀರು ಬೇಕು. ಅಲ್ಲಿ ಬಾವಿ–ಕೊಳವೆಬಾವಿಗಳಲ್ಲಿ ಎತ್ತಿಕೊಳ್ಳಬಹುದಾದಷ್ಟು ಅಂತರ್ಜಲವಿಲ್ಲ. ನಗರಪಾಲಿಕೆಯ ಸರಬರಾಜೂ ಇಲ್ಲ. ಅಲ್ಲಿನ ಜಲಾನಯನ ಪ್ರದೇಶದ ನೀರೆಲ್ಲಾ ಈಗ ಮಳೆಕೊಳದಲ್ಲಿ ಸಂಗ್ರಹವಾಗತೊಡಗಿ ಒಂದೂವರೆ ದಶಕ ಸಂದಿದೆ. ಈವರೆಗೂ ಮಳೆನೀರಲ್ಲೇ ಆ ಸಂಸ್ಥೆ ಕಾರ್ಯವೆಸಗುತ್ತಿದ್ದು, ಒಮ್ಮೆಯೂ 'ಹೊರನೀರು' ತಂದಿಲ್ಲ.

ಕಝುಕ್ಕೂಟದ ಈ ಮಳೆಕೊಯ್ಲಿನ ಯಶಸ್ಸಿನ ನಂತರ ರಾಜ್ಯ ಸರಕಾರದ ಕಿನ್‌ಫ್ರಾ ಅಡೂರಿನ ಫುಡ್ ಪಾರ್ಕ್, ಕುನ್ನಡಾನಂನ ಇಂಡಸ್ಟ್ರಿಯಲ್ ಪಾರ್ಕ್, ಪಾಲಕ್ಕಾಡಿನ ಟೆಕ್ಸ್‌ಟೈಲ್ ಪಾರ್ಕ್ ಎಲ್ಲೆಡೆ ಈ ಥರದ 'ಅಡಿ ಆಣೆ' ಮಾಡಿಸಿಕೊಂಡಿದೆ.

ಡಾ. ತಂಬಿ ನೀರಿನ ರಂಗಕ್ಕೆ ಕಾಲಿರಿಸುವುದರ





ಡಾ. ಪಿ.ಕೆ. ತಂಬಿ